## ಮೈಕ್ರೋಗ್ರಫಿ

ಈ ಹಸ್ತಪ್ರತಿಗಳಲ್ಲಿ ಸ್ಥೂಲವಾಗಿ ಕಾಣುವ ಪದಗಳು ಅರ್ಥರಹಿತವಾದದ್ದು. ಒಂದೊಂದು ಅಕ್ಷರವೂ ಸೂಕ್ಷ್ಮ ಗುರುತುಗಳಿಂದ ರಚಿಸಲಾಗಿದ್ದು ಅದನ್ನು ಸೂಕ್ಷ್ಮ ದರ್ಶಕದಲ್ಲಿ ನೋಡಿದರೆ ಮಾತ್ರ ತಿಳಿಯುತ್ತದೆ, ನಿಜವಾದ ಮಾಹಿತಿ ಅದರಲ್ಲಿ ಅಡಗಿರುತ್ತದೆ. ಇದನ್ನು ಮೈಕ್ರೋಗ್ರಫಿ ಎಂದು ಕರೆಯುತ್ತಾರೆ. ಲ್ಯೂವಿನ್ ಹಾಕ್ ಸೂಕ್ಷ್ಮ ದರ್ಶಕ ಯಂತ್ರವನ್ನು (ಮೈಕ್ರೋಸ್ಕೋಪ್) ಕಂಡುಹಿಡಿಯುವುದಕ್ಕೂ ನಾನೂರು ವರ್ಷಗಳ ಮೊದಲೇ ರೋಜರ್ ಬೇಕನ್ ಕಾಂಪೌಂಡ್ ಮೈಕ್ರೋಸ್ಕೋಪನ್ನು ಬಳಸುತ್ತಿದ್ದ, ಇದನ್ನು ಅವನೇ ಬರೆದಿದ್ದಾನೆ ಎಂದು ಒಂದು ವಾದವಿದೆ. ಆದರೆ ಅಕ್ಷರಗಳ ಗಾತ್ರವನ್ನು ಹಿಗ್ಗಿಸಿ ನೋಡಿದರೆ ಆ ರೀತಿ ಏನೂ ಕಾಣಲಿಲ್ಲ. ಚರ್ಮದ ಹಾಳೆಗಳ ಎಡುಗು ದಿಡುಗಿನಿಂದ ಲೇಖನಿಯ (ಪುಕ್ಕ) ಗೆರೆಗಳು ಸ್ವಲ್ಪ ಅಂಕುಡೊಂಕಾಗಿದೆಯಷ್ಟೇ.

ರಸವಿದ್ಯೆಗೆ ಸಂಬಂಧಿಸಿದ ಪುಸ್ತಕವಲ್ಲ.

ಖಗೋಳ ಶಾಸ್ತ್ರದ ಅಧ್ಯಾಯದಲ್ಲಿ ಒಂದು ಗ್ಯಾಲಕ್ಸಿಯ ಚಿತ್ರವಿದೆ. ಈ ನಾಲ್ಕು ವಕ್ರ ಬಾಹುಗಳಿರುವ ಆಕಾಶ ಕಾಯ ಬರಿಗಣ್ಣಿಗೆ ಕಾಣಲಾಗದ ಗ್ಯಾಲಕ್ಸಿ. ಕೇವಲ ಟೆಲಿಸ್ಕೋಪ್ ನೆರವಿನಿಂದ ಮಾತ್ರ ನೋಡಲು ಸಾಧ್ಯವಿರುವ ಈ ಗ್ಯಾಲಕ್ಸಿಯ ಚಿತ್ರ ಬರೆದಿದ್ದಾರೆಂದರೆ ನಮಗೆ ಅರ್ಥವಾಗದ ಕೆಲವು ಚಿತ್ರಗಳು ಸೂಕ್ಷ್ಮ ದರ್ಶಕ ದಿಂದ ನೋಡಿ ಬರೆದ ಚಿತ್ರಗಳೂ ಇದ್ದಿರಬಹುದು.

ಚರಿತ್ರೆ:

ವಾಯ್ನಿಚ್ ಹಸ್ತಪ್ರತಿಯ ಮೂಲ ಇನ್ನೂ ಅಸ್ಪಷ್ಟ. ಈ ಹಸ್ತಪ್ರತಿಯ ಲಿಪಿಯು ಯಾವ ಪರಿಚಿತ ಭಾಷೆಯ ಲಿಪಿಯನ್ನೂ ಹೋಲುವುದಿಲ್ಲ ವಾದ್ದರಿಂದ ಈ ಪುಸ್ತಕದ ಕಾಲದೇಶಗಳನ್ನು ಕಂಡುಹಿಡಿಯಲು ಇರುವ ಒಂದೇ ಸುಳುಹು ಪುಸ್ತಕದಲ್ಲಿರುವ ಚಿತ್ರಗಳು. ಜನರ ಉಡುಪು, ಕೇಶವಿನ್ಯಾಸ, ಅರಮನೆಗಳ ವಾಸ್ತುಶಿಲ್ಪ,ಇತ್ಯಾದಿಗಳು ಯೂರೋಪಿನ ಲಕ್ಷಣಗಳನ್ನು ತೋರುತ್ತದೆ. ಹೀಗಾಗಿ ಇದು 14501520ರಲ್ಲಿ ರಚಿತವಾದ ಪುಸ್ತಕವೆಂದು ಹೇಳಬಹುದು ಈ ಊಹೆ ಕಾರ್ಬನ್ ಡೇಟಿಂಗ್ ಮಾಹಿತಿಗಿಂತ ನಂತರದ ಕಾಲವನ್ನು ಸೂಚಿಸುತ್ತದೆ.

ಈ ಪುಸ್ತಕವನ್ನು ಹೊಂದಿದ್ದ ತಿಳಿದ ವ್ಯಕ್ತಿಗಳಲ್ಲಿ ಮೊದಲಿಗನೆಂದರೆ 17ನೆಯ ಶತಮಾನದಲ್ಲಿ ಪ್ರೇಗ್‌ನಲ್ಲಿ ವಾಸಿಸುತ್ತಿದ್ದ ಒಬ್ಬ ರಸವಿದ್ಯೆ ವಿಜ್ಞಾನಿ, ಜಾರ್ಜ್ ಬರೇಷ್. ಇಂದು ನಾವು ಎಷ್ಟು ದಿಗ್ಮೂಢರಾಗಿದ್ದೇವೋ ಜಾರ್ಜ್ ಬರೇಷ್ ಸಹ ಅಂದು ಅಷ್ಟೇ ಮೂಕ ವಿಸ್ಮಯವಾಗಿದ್ದರು.

### ಇದನ್ನು ಬರೆದದ್ದು ಯಾರು?

ವಾಯ್ನಿಚ್ ಹಸ್ತಪ್ರತಿ ಎಂದು ಪ್ರಖ್ಯಾತವಾಗಿರುವ ಈ ಪುಸ್ತಕವನ್ನು



ಬರೆದವರು ಯಾರು ಎಂಬ ಬಗ್ಗೆ ಅನೇಕ ವಾದಗಳು ಊಹಾಪೋಹಗಳೂ ಇವೆ. ಅವುಗಳಲ್ಲಿ ಒಂದು ಇದನ್ನು ಬರೆದದ್ದು ರೋಜರ್ ಬೇಕನ್. 1552–1612ರಲ್ಲಿ ಇದ್ದ ಬೊಹೀಮಿಯಾದ ರಾಜ ಹಾಗೂ ಹೋಲಿ ರೋಮನ್ ಚಕ್ರವರ್ತಿ ರುಡಾಲ್ಫ್, ಮೊದಲನೆಯ ಎಲಿಜಬೆತ್ ರಾಣಿಯ ಆಸ್ಥಾನದಲ್ಲಿದ್ದ ಜಾನ್ ಡೀ ಎಂಬ ಗಣಿತಜ್ಞ ಹಾಗೂ ಖಗೋಳ ಶಾಸ್ತ್ರಜ್ಞನಿಂದ ಆರು ನೂರು ಡುಕಟ್ ಗಳನ್ನು ಕೊಟ್ಟು ಅಂದರೆ ಈ ಪುಸ್ತಕದ ತೂಕಕ್ಕೆ ಸರಿಯಾದ ಚಿನ್ನವನ್ನು ನೀಡಿ ಕೊಂಡಿದ್ದನು ಎಂದು 1665ರಲ್ಲಿ ಮಾರ್ಚಿ ಎಂಬುವವನ ಪತ್ರದಲ್ಲಿ ಉಲ್ಲೇಖವಾಗಿದೆ. ಅವನ ಊಹೆಯ ಪ್ರಕಾರ ಇದನ್ನು ಫ್ರಾನ್ಸಿಸ್ ಬೇಕನ್ ಬರೆದಿದ್ದಾನೆ. ಜಾನ್ ಡೀ ಬಳಿ ರೋಜರ್ ಬೇಕನ್ನಿನ ಎಲ್ಲ ಕೃತಿಗಳ ಹಸ್ತಪ್ರತಿಗಳೂ ಇದ್ದವು. ಹೀಗಾಗಿ ಇದನ್ನು ಬರೆದದ್ದು ರೋಜರ್ ಬೇಕನ್ ಇರಬಹುದು ಎಂದು ಊಹಿಸಿದ್ದಾರೆ. ಆದರೆ ವಿಷಯಗಳು ಇಷ್ಟು ಸ್ಪಷ್ಟವಾಗಿ ಬಿಡುವುದಿಲ್ಲ. ಜಾನ್ ಡೀ ಬರೆಯುತ್ತಿದ್ದ ದಿನಚರಿಯನ್ನು ಜೋಪಾನವಾಗಿ ರಕ್ಷಿಸಿಡಲಾಗಿದ್ದು, ಅದರಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪವೇ ಇಲ್ಲ. ಹೀಗಾಗಿ ಇದನ್ನು ಸಂಪೂರ್ಣವಾಗಿ ನಂಬಲು ಸಾಧ್ಯವಿಲ್ಲ. ಜಾನ್ ಡೀ ನೇ ಇದನ್ನು ಬರೆದು ನಂತರ ಮಾರಾಟ ಮಾಡುವ ಉದ್ದೇಶದಿಂದ ಇದನ್ನು ಬರೆದದ್ದು ರೋಜರ್ ಬೇಕನ್ ಎಂಬ ಗಾಳಿಸುದ್ದಿ ಹಬ್ಬಿಸಿದ್ದನೇನೋ ಎಂಬ ಅನುಮಾನವೂ ಇದೆ.

ಪ್ರೇಗ್‌ನಲ್ಲಿದ್ದ ಜಾನ್ ಡೀ ಸಹಚರ ಎಡ್ವರ್ಡ್ ಕೆಲ್ಲಿ ಎಂಬಾತ ತಾನು ರಸವಿದ್ಯೆಯಲ್ಲಿ ನಿಪುಣನೆಂದು ಹೇಳಿಕೊಳ್ಳುತ್ತಿದ್ದ. ವೇಲ್ಸ್‌ನಲ್ಲಿ ಪಾದ್ರಿಯ ಗೋರಿಯನ್ನು ಅಗೆದು ತೆಗೆದಿದ್ದ ನಿಗೂಢ ಪುಡಿಯೊಂದನ್ನು ಬಳಸಿ ತಾಮ್ರವನ್ನು ಚಿನ್ನವಾಗಿ ಪರಿವರ್ತಿಸುತ್ತಿದ್ದನಂತೆ. ಇಷ್ಟೇ ಅಲ್ಲದೆ ದೇವತೆಗಳನ್ನು ಆವಾಹನೆ ಮಾಡಿಕೊಂಡು ಅವುಗಳೊಂದಿಗೆ ದೀರ್ಘ ಸಂಭಾಷಣೆ ಮಾಡುತ್ತಿದ್ದನಂತೆ. ಎಡ್ವರ್ಡ್ ಕೆಲ್ಲಿಯನ್ನು ದೇವತೆ ಸ್ವರ್ಗಕ್ಕೆ ಕರೆದುಕೊಂಡು ಹೋಗಿದ್ದಾಗ ಅವನು ಅಲ್ಲಿ ನೋಡಿದ ವಿಷಯಗಳನ್ನು ಇಲ್ಲಿ ದಾಖಲಿಸಿದ್ದಾನೆ. ದೇವತೆಗಳು ಮಾತನಾಡುವ ಭಾಷೆ ಎನೋಚಿಯನ್ (ಬೈಬಲ್ಲಿನಲ್ಲಿ ಬರುವ ಮೆಥುಸೆಲನ ತಂದೆ ಎನೋಚ್ ನಿಂದ ಬಂದ ಪದ) ನಲ್ಲಿ ವಾಯ್ನಿಚ್ ಹಸ್ತಪ್ರತಿಯನ್ನು ಬರೆಯಲಾಗಿದೆ ಎಂದು ಕೆಲವರು ಹೇಳುತ್ತಾರೆ.

ಪುರಾತನ ಪುಸ್ತಕಗಳ ವ್ಯಾಪಾರಿಯಾಗಿದ್ದ ವಾಯ್ನಿಚ್‌ಗೆ ರೋಜರ್ ಬೇಕನ್ನಿನ ಕಳೆದು ಹೋದ ಪುಸ್ತಕ ಒಂದು ಸಿಕ್ಕರೆ ಎಷ್ಟು ಬೇಡಿಕೆ ಎಷ್ಟು ಬೆಲೆ ಸಿಗಬಹುದು ಎಂಬ ಕಲ್ಪನೆ ಇತ್ತು. ಹೀಗಾಗಿ ಅವನೇ ಏಕೆ ಒಂದು ಸುಳ್ಳು ಪುಸ್ತಕವನ್ನು ಸೃಷ್ಟಿಸಿರಬಾರದು? ಎಂಬ ಗುಮಾನಿಯೂ ಕೆಲವರು ಪಟ್ಟಿದ್ದಾರೆ.

ಹಸ್ತಪ್ರತಿಗಳ ಮೊದಲ ಪುಟದ ಫೋಟೋಕಾಪಿಯನ್ನು 1921ಕ್ಕಿಂತ ಮೊದಲು ವಾಯ್ನಿಚ್ ತೆಗೆದಿದ್ದ. ಅದನ್ನು ಗಮನಿಸಿ ನೋಡಿದರೆ, ರಾಸಾಯನಿಕಗಳನ್ನು ಬಳಸಿ ಅಳಿಸಿ ಹಾಕಿದ ಮಂದವಾದ ಅಕ್ಷರಗಳು ಕಾಣಿಸುತ್ತವೆ. ಅದು ಜೇಕಬ್ ಟೆಪೆನೀಸಿ ಎಂದು ಓದಬಹುದು.

### ಸ್ಟೆಗನೋಗ್ರಫಿ

ಅರ್ಥವಿಲ್ಲದ ಪಠ್ಯದಲ್ಲಿ ಗುಪ್ತವಾದ ಮಾಹಿತಿಯನ್ನು ಕ್ರಮಬದ್ಧವಾಗಿ ಅಡಗಿಸಿಡುವ ತಂತ್ರವನ್ನು ಸ್ಟೆಗನೋಗ್ರಫಿ ಎನ್ನುತ್ತಾರೆ. ಉದಾಹರಣೆಗೆ, ಪ್ರತಿಯೊಂದು ಪದದ ಎರಡನೆಯ ಅಕ್ಷರಗಳನ್ನು ಸೇರಿಸಿದರೆ ಒಂದು ಗುಪ್ತ ಸಂದೇಶ ಸಿಗಬಹುದು. ಇಂತಹ ಗೂಢಲಿಪಿ ಇದ್ದಿರಬಹುದು ಎಂದು ಕೆಲವರು ನಂಬುತ್ತಾರೆ.